ನಕ್ಷತ್ರಪಟ




ಸ. ರಘುನಾಥ

ಕಲೆ: ಸಂತೋಷ್ ಸಸಿಹಿತ್ಲು




# ಡುಬುಕ್ಕು ಜರಜರ ಡುಬುಕ್ಕುಮೇ

ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ

ಇದರಲಿ ಒಂದು ಕಥೆಯುಂಟು
ಯೋಚಿಸಲದು ತಿಳಿಯುವುದು
ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ

ಹೇಳಿಕೊಳ್ಳಿರಿ ಮನಸಲಿ ಇನ್ನೊಮ್ಮೆ
ಮತ್ತೊಮ್ಮೆ ಮಗುದೊಮ್ಮೆ
ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ

ಅಮ್ಮನ ಕೇಳಿರಿ ಅಪ್ಪನ ಕೇಳಿರಿ
ಅಜ್ಜಿ ತಾತಾರ ಕೇಳಿರಿ ಏನಿದು
ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ

ತಿಳಿಯದೆ ಹೋದರೆ ಬನ್ನಿ
ಹೇಳುವೆ ನಿಮಗೆ ಕೇಳಿ
ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ

ಮನೆಯ ಮೇಲಕೆ ಹಬ್ಬಿದ ಸೋರೆ
ಬಳ್ಳಿಯಲಿತ್ತು ದೊಡ್ಡದು ಕಾಯಿ
ಅಲ್ಲಿಯ ಮರಕೆ ಬಂದ ಕೋತಿ
ನೋಡಿತು ಛಾವಣಿ ಮೇಲಿನ ಕಾಯಿ

ತಿನ್ನಲು ಸಿಕ್ಕಿತು ಎಂದು ಹಿಗ್ಗಿ
ನೆಗೆಯಿತು ಛಾವಣಿ ಮೇಲಕೆ ಡುಬುಕ್ಕು
ನೆಗೆದ ರಭಸಕೆ ಕಾಯಿ ಕಿತ್ತು
ಉರುಳಿತು ಛಾವಣಿಯಿಂದ ಜರಜರ

ಉರುಳಿ ಉರುಳಿ ಬಂದ ಕಾಯಿ
ಸೂರುನ ಹತ್ತಿರವಿದ್ದ ಮೇಕೆ
ತಲೆಯ ಮೇಲೆ ಬಿತ್ತೋ ಡುಬುಕ್ಕು
ನೋವಿಗೆ ಮೇಕೆ ಅರಚಿತು ಮೇ

ಡುಬುಕ್ಕು ಜರಜರ ಡುಬುಕ್ಕು ಮೇ
ಡುಬುಕ್ಕು ಜರಜರ ಡುಬುಕ್ಕು ಮೇ